# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಡಿ\488\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:02/09/2020

## ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ

**ವಿಷಯ:** ಸಾರ್ವಜನಿಕ ನೌಕರರಾದ ಶ್ರೀ.ಎನ್.ಕಲ್ಲೇಶ, ಡಾಟಾ ಎಂಟ್ರಿ ಆಪರೇಟರ್ & ಎಂಜಿಎನ್‌ಆರ್‌ಇಜಿ ಯೋಜನೆಯ ಸಹಾಯಕರು, ಹೊನ್ನೇನಹಳ್ಳಿ ಗ್ರಾಮ ಪಂಚಾಯತ್, ಕೋಲಾರ ತಾಲ್ಲೂಕ್ ಮತ್ತು ಜಿಲ್ಲೆ ರವರ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಹೊನ್ನೇನಹಳ್ಳಿ ಗ್ರಾಮದ #1 ನಿವಾಸಿಯಾದ ಶ್ರೀ.ಎಂ.ಕೃಷ್ಣಮೂರ್ತಿ ಬಿನ್ ಮುನಿಯಪ್ಪ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಹೊನ್ನೇನಹಳ್ಳಿ ಗ್ರಾಮ ಪಂಚಾಯತ್‌ನ ಡಾಟಾ ಎಂಟ್ರಿ ಆಪರೇಟರ್ & ಎಂಜಿಎನ್‌ಆರ್‌ಇಜಿ ಯೋಜನೆಯ ಸಹಾಯಕರಾದ ಶ್ರೀ.ಎನ್.ಕಲ್ಲೇಶ (ಇನ್ನು ಮುಂದೆ, '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆಯದೇ ಎದುರುದಾರರು ಗ್ರಾಮ ಪಂಚಾಯತ್‌ನಲ್ಲಿ ಸುಳ್ಳು ಮಾಹಿತಿ ನೀಡಿ ಡಾಟಾ ಎಂಟ್ರಿ ಆಪರೇಟರಾಗಿ ಕಾಯನಿರ್ವಹಿಸುತ್ತಿದ್ದು, ಸದರಿಯವರು ಕಛೇರಿಯಲ್ಲಿ ಇ-ಹಾಜರಾತಿ ಹಾಕಿ ಕಛೇರಿ ಕರ್ತವ್ಯದ ವೇಳೆಯಲ್ಲಿ ವೈಯಕ್ತಿಕ ಕೆಲಸಗಳಿಗೆ ಹೊರಗೆ ಹೋಗುತ್ತಿದ್ದು, ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ. ದೂರುದಾರರು ಹಲವಾರು ಬಾರಿ ತಾಲ್ಲೂಕ್ ಕಛೇರಿ, ಕೋರ್ಟ್ ಮತ್ತು ಪಾರ್ಕ್ ಬಳಿ ಎದುರುದಾರರನ್ನು ಕಛೇರಿ ವೇಳೆ ನೋಡಿ, ವಿಚಾರಿಸಿದ್ದಾಗಿ ಮತ್ತು ಮೇಲಾಧಿಕಾರಿಗಳಿಗೆ ಮೌಖಿಕವಾಗಿ ಸುದ್ದಿ ತಲುಪಿಸಿರುವುದಾಗಿ ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ತಮ್ಮ ಕರ್ತವ್ಯವನ್ನು ಬಹಳ ನಿಷ್ಠೆಯಿಂದ ಮಾಡುತ್ತಿದ್ದು, ಯಾವುದೇ ಅಕ್ರಮ ಚಟುವಟಿಕೆಯಲ್ಲಿ ತೊಡಗಿಲ್ಲ. ಗ್ರಾಮ ಪಂಚಾಯತ್‌ನಿಂದ ಯಾವುದಾದರೂ ವರದಿಗಳು ಅಥವಾ ಟಪಾಲುಗಳು ನೀಡಬೇಕಾದಲ್ಲಿ ಮಾತ್ರ ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್ ಹಾಗೂ ಇತರೆ ಕಛೇರಿಗಳಿಗೆ ಹೋಗಿರುತ್ತೇನೆಯೇ ಹೊರತು, ವೈಯಕ್ತಿಕ ಕಾರ್ಯದ ಮೇಲೆ ಹೋಗಿಲ್ಲ. ತಮ್ಮ ತಂದೆ ದಿ:24/10/99ರಂದು ಮರಣ ಹೊಂದಿದ್ದು, ಮನೆಯಲ್ಲಿ ತಾವು ಮತ್ತು ತಮ್ಮ ತಾಯಿ ಮಾತ್ರ ವಾಸವಿದ್ದೇವೆ. ಸ್ವತ್ತುಗಳನ್ನು ತಮ್ಮ ತಾಯಿ ಮತ್ತು ಚಿಕ್ಕಪ್ಪನವರಿಗೆ ಜಂಟಿ ಖಾತೆ ಮಾಡಲು ಕೋರಿ ಅರಹಳ್ಳಿ ಗ್ರಾಮ ಪಂಚಾಯತ್‌ಗೆ ದಿ:10/04/17ರಂದು ಅರ್ಜಿಯನ್ನು ಸಲ್ಲಿಸಿ ಸುಮಾರು 08 ತಿಂಗಳು ಕಳೆದರೂ, ಯಾವುದೇ ಕ್ರಮ ವಹಿಸದೇ ಇರುವುದರಿಂದ, ದಿ:12/12/17ರಂದು ಗ್ರಾಮ ಪಂಚಾಯತ್‌ನಲ್ಲಿ ಇ-ಅಟೆಂಡೆನ್ಸ್‌ನಲ್ಲಿ ಹಾಜರಾತಿ ನೀಡಿ, ನಂತರ ಸದರಿ ಅರ್ಜಿಗೆ ಸಂಬಂಧಪಟ್ಟಂತೆ ವಿಚಾರಣೆ ಮಾಡುವುದಕ್ಕಾಗಿ, ಅಪರಾಹ್ನ ಅರ್ಧ ದಿನ ರಜೆ ಅರ್ಜಿಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಿ, ಅನುಮತಿ ಪಡೆದು ಹೋಗಿರುತ್ತೇನೆಂದು ಹೇಳಿದ್ದಾರೆ.

4. ಒಂದನೇ ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ದೂರಿನ ಬಗ್ಗೆ ವರದಿ ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್ ಕೋಲಾರ ರವರಿಂದ ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ, 1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

6. ಶ್ರೀಮತಿ.ಜಿ.ಲಕ್ಷ್ಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವರನ್ನು 2ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಕೋಲಾರ ತಾಲ್ಲೂಕ್ ಹೊನ್ನೇನಹಳ್ಳಿ ಗ್ರಾಮ ಪಂಚಾಯತ್‌ನ ದಿ:14/03/2016ರ ಠರಾವಿನನ್ವಯ ಎಂಜಿಎನ್‌ಆರ್‌ಇಜಿ ಯೋಜನೆ ಅಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುವ ಕಾಮಗಾರಿಗಳ ಮತ್ತು ಕಡತಗಳ ನಿರ್ವಹಣೆಗೆ ₹4,500/-ಗಳ ಗೌರವಧನ ವೇತನದ ಆಧಾರದ ಮೇಲೆ ಎದುರುದಾರರನ್ನು ಪಂಚಾಯತ್ ಸಭೆಯಲ್ಲಿ ಆಯ್ಕೆ ಮಾಡಿದೆ. ಮುಂದುವರೆದು, ದಿ:18/05/16ರ

BD/LA 88/18



ಗ್ರಾಮ ಪಂಚಾಯತ್ ಸಾಮಾನ್ಯ ಸಭೆಯ ನಿರ್ಣಯದಂತೆ ಸದರಿಯವರನ್ನು ಹೆಚ್ಚುವರಿಯಾಗಿ ಡಾಟಾ ಎಂಟ್ರಿ ಆಪರೇಟರಾಗಿ ₹5,000/-ಗಳ ಗೌರವಧನ ವೇತನದ ಆಧಾರದ ಮೇಲೆ ಆಯ್ಕೆ ಮಾಡಿದೆ. ಪಂಚಾಯತ್‌ನ ಆದಾಯದಲ್ಲಿ ಸದರಿಯವರಿಗೆ ವೇತನವನ್ನು ನೀಡಲಾಗುತ್ತದೆ. ಸದರಿಯವರು ಈಗಲೂ ಅದೇ ಹುದ್ದೆಯಲ್ಲಿ ಮುಂದುವರೆದಿದ್ದಾರೆ;

2) ಕರ್ನಾಟಕ ಲೋಕಾಯುಕ್ತ ಕಾಯಿದೆ, 1984ರ ಕಲಂ 2(12) ಈ ಕೆಳಗಿನಂತಿದೆ –

"Public servant" means a person who is or was at any time,-

a. the Chief Minister;
b. a Minister;
c. a Member of the State Legislature;
d. a Government servant;
e. the Chairman and Vice-Chairman (by whatever name called) or a member of a local authority in the State of Karnataka or a statutory body or corporation established by or under any law of the State Legislature, including a co-operative society, or a Government Company within the meaning of section 617 of the Companies Act, 1956 and such other corporations or boards as the State Government may, having regard to its financial interest in such corporations or boards, by notification, from time to time, specify;
f. member of a Committee or Board, statutory or non-statutory, constituted by the Government;
**g. <u>a person in the service or pay of,-</u>**
   **i. <u>a local authority in the State of Karnataka;</u>**
   ii. a statutory body or a corporation (not being a local authority) established by or under a State or Central Act, owned or controlled by the State Government and any other board or Corporation as the State Government may, having regard to its financial interest therein by notification, from time to time, specify;
   iii. a company registered under the Companies Act, 1956, in which not less than fifty one percent of the paid up share capital is held by the State Government, or any company which is a subsidiary of such company;
   iv. a society registered or deemed to have been registered under the Karnataka Societies Registration Act, 1960, which is subject to the control of the State Government and which is notified in this behalf in the Official Gazette;
   v. a co-operative Society;
   vi. a university;

Explanation- In this clause, "co-operative society" means a co-operative society registered or deemed to have been registered under the Karnataka Co-operative Societies Act, 1959, and "university" means a university established or deemed to be established by or under any law of the State Legislature."

3) ಗ್ರಾಮ ಪಂಚಾಯಿತಿಯು "ಸ್ಥಳೀಯ ಸಂಸ್ಥೆ" ಯ ಪರಿಭಾಷೆಯಲ್ಲಿ ಬರುತ್ತದೆ. ಕಾರಣ, ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 2(12)(ಜಿ)(i) ರಲ್ಲಿ ಹೇಳಿದ **"<u>a person in the service or pay of a</u>**

local authority in the State of Karnataka" ಇದರ ಪರಿವ್ಯಾಪ್ತಿಯಲ್ಲಿ 1ನೇ ಎದುರುದಾರರು ಬರುತ್ತಾರೆ;

4) 1ನೇ ಎದುರುದಾರರು ಹೊನ್ನೇನಹಳ್ಳಿ ಗ್ರಾಮ ಪಂಚಾಯತ್ ಕಛೇರಿಯಲ್ಲಿ ದಿ:12/12/17ರಂದು ಇ–ಹಾಜರಾತಿ ಹಾಕಿ ಯಾವುದೇ ರಜೆ ಹಾಕದೇ ಕರ್ತವ್ಯದ ವೇಳೆಯಲ್ಲಿ ವೈಯಕ್ತಿಕ ಕೆಲಸಗಳಿಗೆ ಹೊರಗೆ ಹೋಗಿದ್ದಾರೆ ಹಾಗೂ ಇ–ಹಾಜರಾತಿ ಹಾಕಿ ಕಛೇರಿ ಕರ್ತವ್ಯದ ವೇಳೆಯಲ್ಲಿ ವೈಯಕ್ತಿಕ ಕೆಲಸಗಳಿಗೆ ಹೊರಗೆ ಹೋಗುತ್ತಿರುತ್ತಾರೆ ಮತ್ತು ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುತ್ತಾರೆನ್ನುವುದು ದೂರಿನ ಆಪಾದನೆಯಾಗಿದೆ. ಮುಂದುವರೆದು, ಸದರಿಯವರು ನರೇಗಾ ಯೋಜನೆಯ ಫಲಾನುಭವಿಗಳಿಂದ ಹಣ ವಸೂಲಿ ಮಾಡಿದ್ದಾರೆಂದು ದೂರಿನಲ್ಲಿ ಆಪಾದಿಸಿದೆ;

5) ದೂರಿನ ಮೊದಲನೇ ಆಪಾದನೆಗೆ ಸಂಬಂಧಿಸಿದಂತೆ, ಕಡತದಲ್ಲಿ ಲಭ್ಯವಿರುವ 1ನೇ ಎದುರುದಾರರಿಗೆ ಸಂಬಂಧಿಸಿದ ಡಿಸೆಂಬರ್, 2017ರ ಇ–ಹಾಜರಾತಿ ವಹಿಯನ್ವಯ ಈ ಕೆಳಗಿನ ಮಾಹಿತಿ ತಿಳಿದು ಬಂದಿದೆ–

| ಕ್ರ.ಸಂ. | ದಿನಾಂಕ | ಆಗಮನ | ನಿರ್ಗಮನ | ಗೈರು ಹಾಜರಾತಿ |
|---|---|---|---|---|
| 1 | 01/12/17 | 11.52 ಎ.ಎಂ | ಲಭ್ಯವಿಲ್ಲ | – |
| 2 | 02/12/17 | ಈದ್–ಮಿಲಾದ್ ಸರ್ಕಾರಿ ರಜೆ | | |
| 3 | 03/12/17 | ಭಾನುವಾರ | | |
| 4 | 04/12/17 | 10.40 ಎ.ಎಂ | ಲಭ್ಯವಿಲ್ಲ | – |
| 5 | 05/12/17 | 10.38 ಎ.ಎಂ | ಲಭ್ಯವಿಲ್ಲ | – |
| 6 | 06/12/17 | 10.07 ಎ.ಎಂ | ಲಭ್ಯವಿಲ್ಲ | – |
| 7 | 07/12/17 | 11.07 ಎ.ಎಂ | 5.32 ಪಿ.ಎಂ | – |
| 8 | 08/12/17 | 10.37 ಎ.ಎಂ | ಲಭ್ಯವಿಲ್ಲ | – |
| 9 | 09/12/17 | ಎರಡನೇ ಶನಿವಾರ | | |
| 10 | 10/12/17 | ಭಾನುವಾರ | | |
| 11 | 11/12/17 | 11.08 ಎ.ಎಂ | 5.17 ಪಿ.ಎಂ | – |
| 12 | 12/12/17 | 10.35 ಎ.ಎಂ | ಲಭ್ಯವಿಲ್ಲ | – |
| 13 | 13/12/17 | ಗೈರು ಹಾಜರು | | |
| 14 | 14/12/17 | ಗೈರು ಹಾಜರು | | |
| 15 | 15/12/17 | 11.13 ಎ.ಎಂ | 5.19 ಪಿ.ಎಂ | – |
| 16 | 16/12/17 | 11.50 ಎ.ಎಂ | ಲಭ್ಯವಿಲ್ಲ | – |
| 17 | 17/12/17 | ಭಾನುವಾರ | | |
| 18 | 18/12/17 | 11.28 ಎ.ಎಂ | 5.17 ಪಿ.ಎಂ | – |
| 19 | 19/12/17 | 10.41 ಎ.ಎಂ | ಲಭ್ಯವಿಲ್ಲ | – |
| 20 | 20/12/17 | 11.20 ಎ.ಎಂ | ಲಭ್ಯವಿಲ್ಲ | – |

BD/488/18



| | | | | |
|---|---|---|---|---|
| 21 | 21/12/17 | 11.38 ಎ.ಎಂ | ಲಭ್ಯವಿಲ್ಲ | – |
| 22 | 22/12/17 | 10.32 ಎ.ಎಂ | 5.38 ಪಿ.ಎಂ | – |
| 23 | 23/12/17 | 10.09 ಎ.ಎಂ | 6.01 ಪಿ.ಎಂ | – |
| 24 | 24/12/17 | ಭಾನುವಾರ | | |
| 25 | 25/12/17 | ಕ್ರಿಸ್‌ಮಸ್–ಸರ್ಕಾರಿ ರಜೆ | | |
| 26 | 26/12/17 | 10.52 ಎ.ಎಂ | ಲಭ್ಯವಿಲ್ಲ | – |
| 27 | 27/12/17 | 10.23 ಎ.ಎಂ | ಲಭ್ಯವಿಲ್ಲ | – |
| 28 | 28/12/17 | 10.11 ಎ.ಎಂ | ಲಭ್ಯವಿಲ್ಲ | – |
| 29 | 29/12/17 | 11.27 ಎ.ಎಂ | ಲಭ್ಯವಿಲ್ಲ | – |
| 30 | 30/12/17 | 10.49 ಎ.ಎಂ | ಲಭ್ಯವಿಲ್ಲ | – |
| 31 | 31/12/17 | ಗೈರು ಹಾಜರಾತಿ | | |

6) Karnataka Government Secretariat Manual of Office Procedure (Revised) 2005ರ ನಿಯಮ 266 ಮತ್ತು ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ\27\ರಾಸ\2019 ದಿ:26/08/19 ರನ್ವಯ ಕಛೇರಿಗೆ ನೌಕರರು ಬೆಳಿಗ್ಗೆ 10 ಗಂಟೆಗೆ ಹಾಜರಾಗುವುದು ಮತ್ತು ಸಂಜೆ 5.30ರ ನಂತರ ಕಛೇರಿ ಬಿಡುವುದು ಕಡ್ಡಾಯವಾಗಿದೆ;

7) ಮೇಲಿನ ಉಪ ಖಂಡಿಕೆ–5ರಲ್ಲಿ ನಮೂದಿಸಿದನ್ವಯ ಕಛೇರಿ ಕೆಲಸದ ದಿನಗಳಲ್ಲಿ 1ನೇ ಎದುರುದಾರರು ಯಾವುದೇ ದಿನಗಳಂದು ಕಛೇರಿ ಅವಧಿಯಲ್ಲಿ ಕಛೇರಿಗೆ ಹಾಜರಾಗಿಲ್ಲ. ಮುಂದುವರೆದು, 15 ದಿನಗಳಂದು ಇ–ಹಾಜರಾತಿಯಲ್ಲಿ ಕಛೇರಿ ನಿರ್ಗಮನದ ಅವಧಿಯನ್ನು ಉಲ್ಲೇಖಿಸಿಲ್ಲ [Log out ಮಾಡಿರುವುದಿಲ್ಲ]. ಕಛೇರಿ ಇ–ಹಾಜರಾತಿಯಲ್ಲಿ ಕಛೇರಿ ನಿರ್ಗಮನದ ಅವಧಿಯನ್ನು ಉಲ್ಲೇಖಿಸದೇ ಇರುವುದನ್ನು ಪರಿಗಣಿಸಿದ್ದಲ್ಲಿ, ಡಿಸೆಂಬರ್, 2017ರ ಮಾಹೆಯಲ್ಲಿ ಒಟ್ಟು 24 ಕೆಲಸದ ದಿನಗಳಲ್ಲಿ 15 ದಿನಗಳಂದು 1ನೇ ಎದುರುದಾರರು ಕಛೇರಿ ಅವಧಿಯ ಮೊದಲೇ, ಕಛೇರಿಯಿಂದ ನಿರ್ಗಮಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

8) ಮುಂದುವರೆದು, 1ನೇ ಎದುರುದಾರರು 13/12/17, 14/12/17 & 31/12/17ರಂದು ಕಛೇರಿಗೆ ಗೈರು ಹಾಜರಾಗಿರುವುದು ಕಂಡು ಬಂದಿದ್ದು, ಸದರಿ ಗೈರು ಹಾಜರಾತಿಗೆ ಕಾರಣವನ್ನು ನಮೂದಿಸಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವರಿಗೆ ರಜಾ ಅರ್ಜಿಯನ್ನು ನೀಡಿರುವ ಬಗ್ಗೆ ದಾಖಲೆಗಳಿಲ್ಲ. ದಿ:12/12/17ರಂದು ಮಧ್ಯಾಹ್ನದ ಮೇಲೆ ಅರ್ಧ ದಿನ ರಜೆ ನೀಡಬೇಕೆಂದು ಕೋರಿ 1ನೇ ಎದುರುದಾರರು 2ನೇ ಎದುರುದಾರರಿಗೆ ನೀಡಿದ ದಿ:12/12/17ರ ಅರ್ಜಿಯ ಪ್ರತಿ ಮಾತ್ರ ಸಲ್ಲಿಸಿದ್ದಾರೆ;

9) ಮೇಲಿನ ಅಂಶಗಳನ್ನು ಪರಿಗಣಿಸಿದಾಗ, 1ನೇ ಎದುರುದಾರರು ಕಛೇರಿ ಅವಧಿಯಲ್ಲಿ ಕಛೇರಿಗೆ ಹಾಜರಾಗದೇ ಇರುವುದು, ನಿರ್ಗಮನದ ಅವಧಿಯನ್ನು ಇ–ಹಾಜರಾತಿಯಲ್ಲಿ ದಾಖಲಿಸದೇ ಇರುವುದು ಹಾಗೂ ಕಛೇರಿಗೆ ಅನಧಿಕೃತ ಗೈರು ಹಾಜರಾಗಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

8. ಎರಡನೇ (2ನೇ) ಎದುರುದಾರರ ವಿರುದ್ಧ ದೂರಿನಲ್ಲಿ ಯಾವುದೇ ಆಪಾದನೆಗಳು ಇಲ್ಲದಿರುವುದರಿಂದ ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳಿಂದ ಸದರಿಯವರ ದುರ್ನಡತೆ ಕಂಡು ಬರದಿರುವುದರಿಂದ, 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1ನೇ ಎದುರುದಾರರು ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

10. ಒಂದನೇ (1ನೇ) ಎದುರುದಾರರಾದ ಶ್ರೀ.ಎನ್.ಕಲ್ಲೇಶ, ಡಾಟಾ ಎಂಟ್ರಿ ಆಪರೇಟರ್ & ಎಂಜಿಎನ್‌ಆರ್‌ಇಜಿ ಯೋಜನೆಯ ಸಹಾಯಕರು ಇವರು ಗೌರವಧನದ ಆಧಾರದ ಮೇಲೆ ಹೊನ್ನೇನಹಳ್ಳಿ ಗ್ರಾಮ ಪಂಚಾಯತ್, ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಇಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆಗಳು (ವರ್ಗೀಕರಣ, ನಿಯಂತ್ರಣ & ಮೇಲ್ಮನವಿ) ನಿಯಮಗಳು, 1957 ರಡಿ ಇಲಾಖಾ ವಿಚಾರಣೆಯನ್ನು ಈ ಸಂಸ್ಥೆಗೆ ವಹಿಸಲು ಅವಕಾಶವಿರುವುದಿಲ್ಲ. ಆದ್ದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ, 1993ರಡಿ ಸದರಿಯವರ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಂಡು ಕ್ರಮ ಜರುಗಿಸಬೇಕೆಂದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ

5/9/20

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
**ಉಪಲೋಕಾಯುಕ್ತ–2,**
**ಕರ್ನಾಟಕ ರಾಜ್ಯ.**